ಬೀಳುತ್ತದೆ, ಯಾವ ರೀತಿ ಇದೆಯೆಂದು...

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್: ಅಧ್ಯಕ್ಷರೆ, ಕೊಡಗು ಇಡೀ ಗುಡ್ಡಗಾಡು ಪ್ರದೇಶಕ್ಕೆ ಸೇರಿದಂತಹ ಪ್ರದೇಶ. ಹೀಗಿರುವಾಗ ನೀವು ಏಕೆ ಕೊಡಗಿನವರಿಗೆ ಪೂರ್ತಿ ಕೊಡಬಾರದು ಎಂದು ನನ್ನ ಭಾವನೆ. ಕೊಡಗಿನವರಿಗೆ ಪೂರ್ತಿ ಗಿರಿ ಭತ್ಯೆಯನ್ನು ಕೊಡಬೇಕು ಎಂದು ನನ್ನ ಒತ್ತಾಯ.

ಅಧ್ಯಕ್ಷರು : ಹಾಗೇನಾದರೂ ಒಂದು ವೇಳೆ ವೇತನ ಆಯೋಗದ ಶಿಫಾರಸ್ಸಿಗಾಗಿ ಅನುಗುಣವಾಗಿ ಇದ್ದರೆ, ನಿಮ್ಮ ಇಡೀ ಕೊಡಗು ಬರುವುದಾದರೆ, ಈ ಶಿಫಾರಸ್ಸು ಮಾಡುತ್ತಾರೆ. ಮಾಡಿ ಕಳಿಸುತ್ತಾರೆ. ಅದಕ್ಕೆ ಏನೂ ತೊಂದರೆ ಇಲ್ಲ.

ಶ್ರೀ ಸಿದ್ದರಾಮಯ್ಯ : ಅವರು ಅದರ ಬಗ್ಗೆ ಮನವಿ ಕೊಟ್ಟರೆ ಮತ್ತೊಮ್ಮೆ ಪರಿಶೀಲನೆ ಮಾಡೋಣ.

ಯಗಚಿ ನದಿಗೆ ಅಡ್ಡಲಾಗಿರುವ ಸೇತುವೆ

438 - ಶ್ರೀ ಹೆಚ್.ಕೆ. ಕುಮಾರಸ್ವಾಮಿ (ಬೇಲೂರು) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾಸನ ಜಿಲ್ಲೆ ಬೇಲೂರು ಪಟ್ಟಣಕ್ಕೆ ಸಂಪರ್ಕ ಕಲ್ಪಿಸುವ ಯಗಚಿ ನದಿಗೆ ಅಡ್ಡಲಾಗಿರುವ ಸೇತುವೆ ತುಂಬಾ ಕಿರಿದಾಗಿದ್ದು ವಾಹನಗಳ ಸಂಚಾರಕ್ಕೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಸೇತುವೆ ಅಗಲ ಮಾಡಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಬಂದಿದೆ.

ಆ) ಸಧ್ಯಕ್ಕೆ ಪ್ರಸ್ತಾವನೆ ಇರುವುದಿಲ್ಲ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ : ಸನ್ಮಾನ್ಯ ಸಭಾಧ್ಯಕ್ಷರೆ, ಸನ್ಮಾನ್ಯ ಸಚಿವರು ಗಮನಕ್ಕೆ ಬಂದಿದೆ ಎಂದು ಹೇಳಿದ್ದಾರೆ. ಹಾಗೆ ಸಧ್ಯಕ್ಕೆ ಪ್ರಸ್ತಾವನೆ ಇರುವುದಿಲ್ಲ ಎಂದು ಕೂಡ ಹೇಳಿದ್ದಾರೆ. ಬೇಲೂರು ಒಂದು ಪ್ರವಾಸಿ ಕೇಂದ್ರ. ಅಲ್ಲಿರುವ ನದಿಗೆ ಅಡ್ಡಲಾಗಿ ಸುಮಾರು ಹಳೆಯದಾದಂತಹ ಒಂದು ಸೇತುವೆ ಇದೆ. ಇತ್ತೀಚೆಗೆ ವಾಹನಗಳ ಸಂಚಾರ ಹೆಚ್ಚಾಗಿರುವ ಕಾರಣ, ಬಸ್ಸು, ಲಾರಿ, ಮುಂತಾದ ವಾಹನಗಳು ಏಕಕಾಲದಲ್ಲಿ ಬಂದಾಗ ಲಿಂಕ್‌ನಲ್ಲಿ ಸುಮಾರು ಅರ್ಧ ಗಂಟೆ ಸಂಚಾರ ಎರಡೂ ಕಡೆ ಸ್ಥಗಿತವಾಗುತ್ತದೆ. ಹಿಂದೆ ಈ ವಿಷಯವನ್ನು ಸರ್ಕಾರದ ಗಮನಕ್ಕೆ ತಂದಾಗ, ಇದಕ್ಕೆ ಸುಮಾರು ಒಂದೂವರೆ ಕೋಟಿ ರೂಪಾಯಿ ಅಂದಾಜು ಬಂದಿದೆ ಇದು ಪ್ರವಾಸಿ ಕೇಂದ್ರ ಆಗಿರುವುದರಿಂದ,

ಇದರ ಅವಶ್ಯಕತೆ ತುಂಬಾ ಇರುವುದರಿಂದ ದಯಮಾಡಿ ನಮ್ಮ ಸರ್ಕಾರ ಇದನ್ನು ತೀವ್ರ ಗಣನೆಗೆ ತಂದುಕೊಂಡು ಅದನ್ನು ಮಂಜೂರು ಮಾಡಿ, ಕೆಲಸ ಮಾಡತಕ್ಕಂತಹ ಪ್ರಯತ್ನ ಮಾಡಬೇಕು.

ಶ್ರೀ ಸಿ.ಎಂ. ಉದಾಸಿ : ಸನ್ಮಾನ್ಯ ಸಭಾಧ್ಯಕ್ಷರೆ, ಈ ಸೇತುವೆ ಸುಮಾರು 80 ವರ್ಷಗಳ ಹಿಂದೆ ನಿರ್ಮಾಣವಾದಂತಹ ಸೇತುವೆ. ಈ ಸೇತುವೆಯನ್ನು ದುರಸ್ತಿ ಮಾಡಿಸುವುದಕ್ಕೆ ಸಾಧ್ಯ ಆಗುವುದಿಲ್ಲ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆ. ಇದಕ್ಕೆ ಪ್ಯಾರಲಲ್ ಆಗಿ ಮತ್ತೊಂದು ಸೇತುವೆಯನ್ನು ನಿರ್ಮಾಣ ಮಾಡಬೇಕು ಎನ್ನುವುದನ್ನು ಸರ್ಕಾರ ಗಮನದಲ್ಲಿ ಇಟ್ಟುಕೊಂಡಿದೆ. ಈ ನಿರ್ಮಾಣ ಕಾರ್ಯಕ್ಕೆ ಸುಮಾರು ಅಂದಾಜು ವೆಚ್ಚ ಎರಡು ಕೋಟಿ ರೂ. ಬೇಕಾಗುತ್ತದೆ. ಇದನ್ನು ಶೀಘ್ರದಲ್ಲಿ ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು : ಇಲ್ಲಿಗೆ ಪ್ರಶ್ನೋತ್ತರ ವೇಳೆ ಮುಗಿಯಿತು.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ಈ ದಿವಸ ಲಿಖಿತ ಮೂಲಕ ಉತ್ತರಿಸುವ 30ನೇ ಪ್ರಶ್ನೆಗಳ ಪಟ್ಟಿಯಲ್ಲಿ ಒಟ್ಟು 61 ಪ್ರಶ್ನೆಗಳ ಪೈಕಿ 33 ಪ್ರಶ್ನೆಗಳಿಗೆ ಉತ್ತರವನ್ನು ಸದನದಲ್ಲಿ ಮಂಡಿಸಿದ್ದೇನೆ. ದಿನಾಂಕ 14.8.97 ರಂದು ಉಪವೇಶನ ನಡೆಯದ ಕಾರಣ ಆದಿನದ 15 ಚುಕ್ಕೆ ಪ್ರಶ್ನೆಗಳ ಪೈಕಿ 14 ಪ್ರಶ್ನೆಗಳಿಗೆ ಉತ್ತರವನ್ನು, ಹಾಗೂ ಲಿಖಿತ ಮೂಲಕ ಉತ್ತರಿಸುವ ಒಟ್ಟು 75 ಪ್ರಶ್ನೆಗಳ ಪೈಕಿ 30 ಪ್ರಶ್ನೆಗಳಿಗೆ ಉತ್ತರವನ್ನು ಸದನದಲ್ಲಿ ಮಂಡಿಸಿದ್ದೇನೆ.

ಸಣ್ಣ ಉಳಿತಾಯ ಇಲಾಖೆಯಿಂದ ಇನ್ಸೆಂಟಿವ್ ಹಣವನ್ನು ನೀಡದೇ ಇರುವುದು.

2306 - ಶ್ರೀ ಅಲ್ಲಂ ವೀರಭದ್ರಪ್ಪ (ಕುರುಗೋಡು) : ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1996-97ನೇ ಸಾಲಿನಲ್ಲಿ ರಾಜ್ಯದಲ್ಲಿ ರಾಷ್ಟ್ರೀಯ ಉಳಿತಾಯ ಯೋಜನೆ (ಎನ್.ಎಸ್.ಸಿ.) ಗಳಲ್ಲಿ ಹಣ ತೊಡಗಿಸಿದವರಿಗೆ ಸಣ್ಣ ಉಳಿತಾಯ ಇಲಾಖೆ ಶೇಕಡ ಎರಡರಷ್ಟು ಹಣವನ್ನು ಇನ್ಸೆಂಟಿವ್ ಎಂದು ನೀಡಿರುವುದಾಗಿ ಪ್ರಕಟಿಸಿದ್ದುದು ನಿಜವಲ್ಲವೇ?

ಆ) ಹಾಗಿದ್ದಲ್ಲಿ ಈ ರೀತಿ ಹಣ ತೊಡಗಿಸಿದವರಿಗೆ ಇಲ್ಲಿಯವರೆಗೆ ಇನ್ಸೆಂಟಿವ್ ಹಣವನ್ನು ಪಾವತಿ ಮಾಡದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಬೇರೆ ರಾಜ್ಯಗಳಲ್ಲಿರುವಂತೆ ಸ್ಥಳದಲ್ಲಿಯೇ ಈ ಇನ್ಸೆಂಟಿವ್ ಹಣವನ್ನು 1997-98ನೇ ಸಾಲಿನಲ್ಲಿ ನೀಡಲು ಸರ್ಕಾರ ಕ್ರಮ ಕೈಗೊಳ್ಳುತ್ತಿದೆಯೇ?